# ಲಿಂಗದೀಕ್ಷೆ ಕಾರ್ಯಕ್ರಮ

**ಚಿತ್ರದುರ್ಗ, ಜೂ. 22** - ಶರಣಸಂಸ್ಕೃತಿ, ಕಾಯಕದ ಮೇಲೆ ಶ್ರದ್ಧೆ, ಲಿಂಗಾಂಗ ಸಾಮರಸ್ಯ ಬಯಸಿ 12ನೇ ಶತಮಾನದಲ್ಲಿ ಲಿಂಗಸಂಸ್ಕಾರವನ್ನು ಪಡೆದು ಲಿಂಗಾಯತರು ಶರಣಾಯತರಾದರು. ಅದೇ ಪರಂಪರೆಯ ಶೂನ್ಯಪೀಠವಾದ ಶ್ರೀ ಮುರುಘರಾಜೇಂದ್ರ ಮಠದಲ್ಲಿ ನೂರಾರು ಸಾಧಕರಿಗೆ ಲಿಂಗದೀಕ್ಷೆ ಮಾಡಲಾಗುತ್ತಿದೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಶ್ರೀ ಮುರುಘರಾಜೇಂದ್ರ ಮಠದಲ್ಲಿ ನಡೆದ ಲಿಂಗದೀಕ್ಷಾ ಕಾರ್ಯಕ್ರಮದಲ್ಲಿ ಬಂಜಾರ ಮತ್ತು ಲಿಂಗಾಯತ ಸಮಾಜಕ್ಕೆ ಸೇರಿದ ಇಬ್ಬರು ಯುವಕರಿಗೆ ಲಿಂಗದೀಕ್ಷೆ ನೀಡಿ ಮಾತನಾಡಿದ ಶ್ರೀಗಳು, ಚಿತ್ರದುರ್ಗ ಜೋಗಿಮಟ್ಟಿ ರಸ್ತೆಯ ವಾಸಿಗಳಾದ ಬಂಜಾರ ಸಮಾಜದ ಶ್ರೀಮತಿ ರೇಷ್ಮಾಬಾಯಿ ಮತ್ತು ಶ್ರೀನಿವಾಸ ನಾಯಕ ದಂಪತಿಯ ಮಗ ನಂದಾಮಸಂದ್ (12ವರ್ಷ) ಅವರಿಗೆ ಲಿಂಗದೀಕ್ಷೆ ನೀಡಿ ಶ್ರೀ ನಂದಾಮಸಂದ್ ಸೇವಾಲಾಲ್ ಸ್ವಾಮೀಜಿ ಎಂದು ಹಾಗು ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಾಸಲು ಗ್ರಾಮದ ಲಿಂಗಾಯತ ಸಮಾಜಕ್ಕೆ ಸೇರಿದ ಶ್ರೀಮತಿ ಮಂಜುಳಮ್ಮ ಮತ್ತು ಚನ್ನಬಸವಯ್ಯ ದಂಪತಿಗಳ ಪುತ್ರ ನಿಂಗರಾಜು (30ವರ್ಷ) ಅವರಿಗೆ ಲಿಂಗದೀಕ್ಷೆ ನೀಡಿ ಶ್ರೀ ಬಸವಲಿಂಗರಾಜ ದೇವರು ಎಂದು ನಾಮಕರಣ ಮಾಡಲಾಗಿದೆ. ಇಬ್ಬರು ಸಾಧಕರು ಶ್ರೀಮಠದ ಗುರುಕುಲದಲ್ಲಿ ಶ್ವೇತವಸ್ತ್ರಧಾರಿಗಳಾಗಿ ಹೆಚ್ಚಿನ ವಿದ್ಯಾಭ್ಯಾಸವನ್ನು ಪಡೆಯಲಿದ್ದಾರೆ ಎಂದು ಹೇಳಿದರು.

ಲಿಂಗದೀಕ್ಷೆ ಪಡೆದಿರುವ ವಟುಗಳು ಉತ್ತಮ ವಿದ್ಯಾಭ್ಯಾಸ, ಬಸವತತ್ತ್ವವನ್ನು ಕಲಿತು ಜನಾಂಗಕ್ಕೆ ಅವರು ದಾರಿ ತೋರಿಸಬೇಕು. ಈರ್ವರು ಶ್ರೀಮಠದಲ್ಲಿದ್ದುಕೊಂಡು ವಿದ್ಯಾಭ್ಯಾಸ ಮಾಡುತ್ತ, ಹೆಚ್ಚಿನದನ್ನು ನಮ್ಮ ಸಾಧಕರೊಟ್ಟಿಗೆ ಗುರುಕುಲದಲ್ಲಿ ಕಲಿತು ಬಸವಾದಿ ಶರಣರ ಪರಂಪರೆ, ತತ್ತ್ವ ಸಿದ್ಧಾಂತಗಳನ್ನು ಸಮಾಜಕ್ಕೆ ಮತ್ತಷ್ಟು ಪರಿಚಯಿಸಬೇಕು. ಉತ್ತಮ ಸಾಧನೆಗಳನ್ನು ಮಾಡಿ ಮೌಢ್ಯತೆಗಳನ್ನು ತಿದ್ದಬೇಕು. ಗುರು ಮುಟ್ಟಿ ಗುರುವಾಗುವ ಸಂಬಂಧವೇ ಶರಣ ಪರಂಪರೆ. ಸಾಧನೆಯ ಮೂಲಕ ಹೆಚ್ಚಿನ ಅನುಭವವಾಗುತ್ತದೆ. ತಮ್ಮ ಜನಾಂಗದಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಬಂಜಾರ ಗುರುಪೀಠದ ಕಾರ್ಯಾಧ್ಯಕ್ಷ ರಾಜಾನಾಯ್ಕ, ಉಪಾಧ್ಯಕ್ಷ ಜೆ. ಮಾಧವನಾಯ್ಕ, ಪ್ರಧಾನಕಾರ್ಯದರ್ಶಿ ಕೆ. ಮಂಜುನಾಥ ನಾಯ್ಕ, ಎಂಕುಸಾದ್ ಬಾವಾಜಿ, ಸುಮಿತ್‌ಕುಮಾರ್, ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ.ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ.ದೊರೆಸ್ವಾಮಿ, ಆರ್. ಲಿಂಗರಾಜು ಮುಂತಾದವರಿದ್ದರು.













